# Launch of booklet on 'Pre departure information for Indians going to the European Union'

November 11, 2021

## ಯೂರೋಪಿನ ಒಕ್ಕೂಟಕ್ಕೆ ತೆರಳುವ ಭಾರತೀಯರಿಗೆ ನಿರ್ಗಮನ ಪೂರ್ವ ಮಾಹಿತಿ ಕುರಿತು ಕಿರುಪುಸ್ತಕ ಬಿಡುಗಡೆ

ನವೆಂಬರ್ 11, 2021

ಯೂರೋಪಿನ ಒಕ್ಕೂಟಕ್ಕೆ ಹೋಗುವ ವಲಸೆ ಕಾರ್ಮಿಕರ ಕಲ್ಯಾಣ ಮತ್ತು ಅವರ ಸಹಾಯಕ್ಕಾಗಿ, ವಲಸೆಗಾಗಿ ಭಾರತ ಕೇಂದ್ರ (ಐಸಿಎಮ್), ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಮ್‌ಇಎ) ಮತ್ತು ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್‌ಒ) ಯ ಚಿಂತಕರ ಚಾವಡಿಯು ಪ್ರೀ ಡಿಪಾರ್ಚರ್ ಒರಿಯಂಟೇಶನ್ (ಪಿಡಿಒ) ಕೈಪಿಡಿಯನ್ನು ಸಿದ್ದಪಡಿಸಿದೆ. ಈ ಕೈಪಿಡಿಯನ್ನು ಶ್ರೀ ಅಬ್ಬಗನಿ ರಾಮು, ಜಂಟಿ ಕಾರ್ಯದರ್ಶಿ (ಒಐಎ ಐ) ಮತ್ತು ಸಿಇಒ ಐಸಿಎಂ ಮತ್ತು ಶ್ರೀ. ಸೆಪೊ ನೂರ್ಮಿ, ಉಪ ಮುಖ್ಯಸ್ಥರು, ಭಾರತ ಮತ್ತು ಭೂತಾನ್‌ಗೆ ಯುರೋಪಿಯನ್ ಒಕ್ಕೂಟದ ನಿಯೋಗ, 11 ನವೆಂಬರ್ 2021 ರಂದು ನಿರ್ಗಮನದ ಪೂರ್ವ ಕೈಪಿಡಿಯನ್ನು ರಾಷ್ಟ್ರೀಯ ಬಿಡುಗಡೆ ಸಮಾರಂಭದಲ್ಲಿ ಬಿಡುಗಡೆ ಮಾಡಿದರು.

ವಲಸೆ ಮತ್ತು ಚಲನಶೀಲತೆಗಾಗಿ ಭಾರತ- ಯೂರೋಪಿನ ಒಕ್ಕೂಟ ಸಾಮಾನ್ಯ ಕಾರ್ಯಸೂಚಿಯ (ಸಿಎಎಂಎಂ) ಒಪ್ಪಿಗೆಯ ಕ್ರಮಗಳನ್ನು ಅನುಷ್ಠಾನಗೊಳಿಸುವ ತಾಂತ್ರಿಕ ಯೋಜನೆಯ ಭಾಗವಾಗಿ ಈ ಕೈಪಿಡಿಯನ್ನು ಅಭಿವೃದ್ಧಿಪಡಿಸಲಾಗಿದೆ. ಯೂರೋಪಿನ ಒಕ್ಕೂಟಕ್ಕೆ ವಲಸೆ ಹೋಗಲು ಬಯಸುವ ಭಾರತೀಯ ವಲಸಿಗರಿಗೆ ಈ ಕೈಪಿಡಿಯು ಸಮಗ್ರ ಮಾಹಿತಿ ಮತ್ತು ಮಾರ್ಗದರ್ಶನವನ್ನು ಒದಗಿಸುತ್ತದೆ. ಇದು ಯುರೋಪಿಯನ್ ಒಕ್ಕೂಟಕ್ಕೆ ವಲಸೆಯಲ್ಲಿ ಒಳಗೊಂಡಿರುವ ಪ್ರಕ್ರಿಯೆಗಳು, ಲಭ್ಯವಿರುವ ವೀಸಾಗಳ ಪ್ರಕಾರಗಳು, ಪೂರ್ವ ಆಗಮನ ಮತ್ತು ನಂತರದ ಆಗಮನದ ಮಾಹಿತಿಯಂತಹ ಅಗತ್ಯ ಮಾಹಿತಿಯನ್ನು ಒಳಗೊಂಡಿರುತ್ತದೆ, ಇದು ಯುರೋಪಿಯನ್ ಒಕ್ಕೂಟಕ್ಕೆ ವಲಸೆ ಹೋಗಲು ಬಯಸುವ ಯಾರಿಗಾದರೂ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸುತ್ತದೆ. ಕೈಪಿಡಿ ಆನ್‌ಲೈನ್‌ನಲ್ಲಿ ಲಭ್ಯವಿರುತ್ತದೆ ಮತ್ತು ವ್ಯಾಪಕವಾಗಿ ವಿತರಿಸಲಾಗುತ್ತದೆ.

ಈ ಪ್ರೀ ಡಿಪಾರ್ಚರ್ ಒರಿಯಂಟೇಶನ್ ಕೈಪಿಡಿಯು ವಿದೇಶದಲ್ಲಿ ಕೆಲಸ ಮಾಡಲು ಬಯಸುವ ಎಲ್ಲಾ ವಲಸಿಗರಿಗೆ ನಿರ್ಗಮನದ ಪೂರ್ವ ಒರಿಯಂಟೇಶನ್ ಅನ್ನು ನೀಡುವಲ್ಲಿ ಭಾರತ ಸರ್ಕಾರದ ಪ್ರಯತ್ನಗಳಿಗೆ ಪ್ರಮುಖ ಸೇರ್ಪಡೆಯಾಗಿದೆ. ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವೆ ಸುರಕ್ಷಿತ ಮತ್ತು ಕಾನೂನುಬದ್ಧ ವಲಸೆಯನ್ನು ಖಚಿತಪಡಿಸಿಕೊಳ್ಳಲು ಮಾಡಲಾಗುತ್ತಿರುವ ಪ್ರಯತ್ನಗಳನ್ನು ಇದು ಬಲಪಡಿಸುತ್ತದೆ.

**ನವ ದೆಹಲಿ**
**ನವೆಂಬರ್ 11, 2021**

DISCLAIMER: This is an approximate translation. The original is available in English on MEA's website and may be referred to as the official press release.